**<u>ಸಾಕ್ಷಿಯನ್ನು ದಿನಾಂಕಃ 05-02-2026 ರಂದು ಕರೆಯಿಸಿ ಪ್ರಮಾಣ ವಚನ ನೀಡಲಾಯಿತು.</u>**

**<u>ಪಾಟೀಸವಾಲುಃ 5 ಮತ್ತು 6 ನೇ ಪ್ರತಿವಾದಿ ಪರ ವಕೀಲರವರಿಂದಃ</u>**

3 ನೇ ದಾವಾ ಅಸ್ತಿಯು ಪ್ರತಿವಾದಿ 5(ಎ) ರಿಂದ 5(ಸಿ) ಇವರ ಸ್ವಾಧೀನದಲ್ಲಿರುವುದು ಅಂದರೆ ಸರಿ. 8 ನೇ ಪ್ರತಿವಾದಿ ಚಂದ್ರಪ್ಪ ದಾವೆ ಹಾಕುವ ಪೂರ್ವದಲ್ಲಿ ಮೃತ ಪಟ್ಟಿರುವರು ಅಂದರೆ ಸರಿ. ದಾವಾ ಅಸ್ತಿಗಳ ಕುರಿತು ಯಾವುದೇ ಮಾಹಿತಿ ಇಲ್ಲದೇ ಇರುವ ಕಾರಣ ಸತ್ತ ವ್ಯಕ್ತಿಯ ಮೇಲೆ ಸುಳ್ಳು ದಾವೆ ಮಾಡಿದ್ದೇವೆ ಅಂದರೆ ಸರಿಯಲ್ಲ. 5 ರಿಂದ 7 ನೇ ಪ್ರ 2 ವಾದಿಯ ಯರಬಾಳು ಕೊಟ್ರಪ್ಪನು ಮಕ್ಕಳು ಅಂದರೆ ಸರಿ. ಸರ್ವೆ ನಂ 247/ಡಿ1 ವಿಸ್ತಿರ್ಣ 80 ಸೆನ್ಸ ಮತ್ತು 247/DE ವಿಸ್ತಿರ್ಣ 1 ಎಕರೆ 13 ಸೆನ್ಸ ಇವುಗಳನ್ನು 1 ರಿಂದ 4 ನೇ ಪ್ರತಿವಾದಿಗಳು ಗಣೇಶಪ್ಪನಿಗೆ ಅಂದರೆ 6 ನೇ ಪ್ರತಿವಾದಿಗೆ ನೊಂದಾಯಿತ ಖರೀದಿ ಪತ್ರದ ಮೂಲಕ ಮಾರಾಟ ಮಾಡಿರುವರು ಅಂದರೆ ಸರಿ.

2. ಸರ್ವೆ ನಂ 247/ಡಿ2 ವಿಸ್ತಿರ್ಣ 1 ಎಕರೆ 38 ಸೆನ್ಸ ಇದು ಮೂಲತಃ ಯರಬಾಳು ಕೊಟ್ರಪ್ಪನಿಗೇ ಸೇರಿತ್ತು ಅಂದರೆ ಸರಿ ಈಗ ಅದು 6 ನೇ ಪ್ರತಿವಾದಿಗೆ ಬಂದಿರುತ್ತದೆ ಅಂದರೆ ಸರಿ. ಸರ್ವೆ ನಂ 247/ಡಿ2 ಇದು ನಮಗೆ ಸೇರಿದ್ದು ಎಂದು ತೋರಿಸಲು ನಾನು ಯಾವುದೇ ದಾಖಲೆಯನ್ನು ಹಾಜರು ಪಡಿಸಿರುವುದಿಲ್ಲ. 1968 ರಿಂದ ಸದರಿ ಅಸ್ತಿಯ ಪಹಣಿ ಯರಬಾಳು

ಕೊಟ್ರಪ್ಪನ ಹೆಸರಿಗೆ ಇರುವುದು ಅಂದರೆ ಸರಿ. ದಾವಾ ಶೆಡ್ಯೂಲಿನ ಐಟಂ ನಂ 3 ಅಲ್ಲಿ ಕಾಣಿಸಿರುವ ಅಸ್ತಿಗಳು ನನಗೆ ಸಂಬಂದ ಇಲ್ಲ ಅಂದರೆ ಸರಿಯಲ್ಲ.

3. ನಾನು ಹಾಗೂ 1 ರಿಂದ 4 ನೇ ಪ್ರತಿವಾದಿಗಳು ಬಹಳ ವರ್ಷಗಳಿಂದ ಬೇರೆ ಬೇರೆ ವಾಸವಾಗಿದ್ದೇವೆ ಅಂದರೆ ಸರಿ. ನಾನು ಹಾಗೂ 1 ರಿಂದ 4 ನೇ ಪ್ರತಿವಾದಿಗಳು ಮಿಲಾಪಿಯಾಗಿ ಸುಳ್ಳು ದಾವೆ ಸಲ್ಲಿಸಿದ್ದೇವೆ ಅಂದರೆ ಸರಿಯಲ್ಲ. ಕ್ರಯ ಪತ್ರ ಆಗಿರುವ ವಿಚಾರ ನನಗೆ ಮೊದಲಿನಿಂದಲೂ ಗೊತ್ತಿರುತ್ತದೆ ಅಂದರೆ ಸರಿ. ದಾವೆ ಹಾಕುವ ವರೆಗೂ ಕ್ರಯ ಪತ್ರವನ್ನು ಪ್ರಶ್ನೆ ಮಾಡಿರುವುದಿಲ್ಲ ಅಂದರೆ ಸರಿ. ಮೂಲ 5 ನೇ ಪ್ರತಿವಾದಿಯು ಕಾಗದ ಪತ್ರಗಳನ್ನು ಪರಿಶೀಲಿಸಿ ಖರೀದಿ ಮಾಡಿಕೊಂಡಿದ್ದು ಅವರು ಸದ್ಭಾವನಾ ಖರೀದಿದಾರರು ಅಂದರೆ ಸರಿ.

4. 5 ರಿಂದ 7 ನೇ ಪ್ರತಿವಾದಿಯರಿಗೆ ತೊಂದರೆ ಕೊಡಲು ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**<u>ಪಾಟೀ ಸವಾಲು:</u>** 1 ರಿಂದ 3 ನೇ ಪ್ರತಿವಾದಿಗಳು ಗೈರು ಹಾಜರಾಗಿದ್ದು ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**<u>ಪಾಟೀ ಸವಾಲು:</u>** 9 ನೇ ಪ್ರತಿವಾದಿ ಪರ ವಕೀಲರು ಸಮಯ ಕೋರಿರುವರು. ಸಮಯ ನೀಡಲು ಯಾವುದೇ ಸಕಾರಣ ಇಲ್ಲದ ಕಾರಣ ಪ್ರಾರ್ಥನೆಯನ್ನು

ತೀರಿಸ್ಕಲಾಯಿತು. 9 ನೇ ಪ್ರತಿವಾದಿ ಪರ ಯಾವುದೇ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರು ವಿಚಾರಣೆಃ ಇಲ್ಲ.**

**( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸರಿಯಿದೆ.**

**05-02-2026**
**ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ. ಹರಪನಹಳ್ಳಿ**

**ಸಾಕ್ಷಿಯ ಸಹಿ** 05.02.2026